**ಅಸಲು ದಾವಾ ಸಂಖ್ಯೆ 1/2021**

**ಪಿ.ಡಬ್ಲ್ಯೂ: 1**

**ಸಾಕ್ಷಿಯನ್ನು ದಿನಾಂಕ 11.12.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರೆದ ಪಾಟಿ ಸವಾಲುಃ ಶ್ರೀ ಎಸ್.ವಿ.ಎಃ ವಕೀಲರು ಪ್ರತಿವಾದಿ ಪರವಾಗಿಃ**

**8.** ಸಾಮಾನ್ಯವಾಗಿ ಮಠ ಸ್ಥಾಪನೆಯಾದಾಗ ಸದರಿ ಮಠಕೆ ಪೀಠಾಧಿಕಾರಿಯನ್ನು ನೇಮಿಸುತ್ತಾರೆ ಎನ್ನುವುದು ಸರಿ. ಅದೇ ರೀತಿ ಶ್ರೀಕಲ್ಮಠ ಕ್ಷೇತ್ರದಲ್ಲಿ ಸ್ವಾಮೀಜಿಯನ್ನು ಪೀಠಾಧಿಕಾರಿಯಾಗಿ ನೇಮಕ ಮಾಡಿದ್ದರು ಎನ್ನುವುದು ಸರಿ . ಶ್ರೀ ಕಲ್ಮಠ ಕ್ಷೇತ್ರಕ್ಕೆ ಪ್ರಭು ಸ್ವಾಮಿ ಎನ್ನುವವರು ಮೊದಲ ಪೀಠಾಧಿಕಾರಿಯಾಗಿದ್ದರು. ಸದರಿ ಮಠದಲ್ಲಿ ಮಾಡಿದ ಟ್ರಸ್ಟ ಡೀಡ್ ನ ಸಂಸ್ಥಾಪಕರು ಯಾರು ಎಂದು ನನಗೆ ನೆನಪಿಲ್ಲ.

9. ಟ್ರಸ್ಟ ಡೀಡ್ ನ ಹೆಸರು ಶ್ರೀ ಕ್ಷೇತ್ರ ವಿರಕ್ತ ಕಲ್ಮಠ. ಸಮಾಜಮುಖಿ ಕೆಲಸ ಮಾಡಲು ಮತ್ತು ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸಲು ಎಲ್ಲರೂ ಸೇರಿ ಟ್ರಸ್ಟ ಡೀಡ್ ಮಾಡಿರುತ್ತಾರೆ. ಧಾರ್ಮಿಕ ಜಾಗೃತಿಯನ್ನು ಉಂಟುಮಾಡುವುದು , ಸಾಮಾಜಿಕ ಕೆಲಸಗಳಿಗೆ ಪ್ರೋತ್ಸಾಹ ನೀಡುವುದು, ಸಮಸ್ಯೆಗಳಿಗೆ ಪರಿಹಾರ ಮಾಡುವುದು ಮತ್ತು ಇತರ ಸದುದ್ದೇಶಗಳಿಗಾಗಿ ಟ್ರಸ್ಟ ಡೀಡ್ ಮಾಡಲಾಯಿತು. ಆಧ್ಯಾತ್ಮಿಕ ಧಾರ್ಮಿಕ ಮತ್ತು ಶಿಕ್ಷಣದ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿದೆ.

**10**. ನಿಪಿ.1 ಎ ದಾಖಲೆಯಲ್ಲಿ " ಹೊಸಪೇಟೆ ತಾ ಕಂಪ್ಲಿನಿರಾಭಾರಿ ವೀರಶೈವ ಜಂಗಮರು ಯಿನಾಂದಾರು ಶ್ರೀಮನ್ ನಿರಂಜನ ನಿರಾಭಾರಿ ಯರಡು ಕೇರೆ ಕಂಪ್ಲಿ ಕಲ್ಲು ಮಠದ ಗುರುಶಿದ್ದಸ್ವಾಮಿಗಳ ಕರಕಮಲ ಸಂಜಾತರಾದ ಶ್ರೀ ಪ್ರಭುಸ್ವಾಮಿಗಳು 1 ಸದ್ರಿ ಮಠಕ್ಕೆ ಕರಕಮಲ ಸಂಜಾತರದ ಗುರುಸಿದ್ದಸ್ವಾಮಿಗಳು " ಏಪಾರ್ಟು ಮಾಡಿದ ಟ್ರಸ್ಟ ಡೀಡ್ ಎಂದು ಉಲ್ಲೇಖ ಇದೆ ಎನ್ನುವುದು ಸರಿ .

**11.** ಕಂಪ್ಲಿ ಶ್ರೀಕಲ್ಮಠದ ಮೊದಲು ಪೀಠಾಧಿಕಾರಿ ಶ್ರೀ ಪ್ರಭು ಸ್ವಾಮಿಗಳು ಎನ್ನುವುದು ಸರಿ. ಶ್ರೀ ಪ್ರಭುಸ್ವಾಮಿಗಳು ಜೀವಂತ ಇದ್ದ ಸಮಯದಲ್ಲಿ ಶ್ರೀ ಗುರುಸಿದ್ದಸ್ವಾಮಿಗಳನ್ನು ಮರಿಸ್ವಾಮಿ ಎಂದು ಆಯ್ಕೆ ಮಾಡಿದ್ದರು ಎನ್ನುವುದು ಸರಿ . ನಿಪಿ.1 ಟ್ರಸ್ಟ ಡೀಡ್ ಕಂಪ್ಲಿ ಕಲ್ಮಠಕ್ಕೆ ಸೇರಿದ ಟ್ರಸ್ಟ ಡೀಡ್ ಎನ್ನುವುದು ಸರಿ .

**12.** ಕಲ್ಮಠವು ರಿಲೀಜಿಯಸ್ ಮತ್ತು ಚಾರಿಟೇಬಲ್ ಟ್ರಸ್ಟ ಎಂದು ಅದು ನಡೆಸುವ ಕಾರ್ಯಕ್ರಮದ ಆಧಾರದ ಮೇಲೆ ಹೇಳುತ್ತಿದ್ದೇನೆ. ಜಾತಿ, ಮತ, ಪಂಥ ಇಲ್ಲದೆ ಸುಮಾನತೆಯಿಂದ ನಡೆಯುವ ತತ್ವವನ್ನು ಪಾಲಿಸುತ್ತದೆ. ನಿಪಿ.1 ರಲ್ಲಿ ಮಠವು ಧಾರ್ಮಿಕ ಮತ್ತು ಪರೋಪಕಾರಿ ಕೆಲಸಕ್ಕೆ ಸ್ಥಾಪಿತವಾಗಿದೆ ಎಂದು ಉಲ್ಲೇಖ ಮಾಡಿಲ್ಲ ಎನ್ನುವುದು ಸರಿಯಲ್ಲ. ನಿಪಿ.1 ದಾಖಲೆಯ ಪುಟ 2 ರಲ್ಲಿ ಸಮಾದಿ ಮೇಲೆ ತ್ರಿಕಾಲ ಪೂಜೆಮಾಡುವುದು, ಶಿವರಾತ್ರಿ ಪೂಜೆ ಮಾಡುವುದು, ರುದ್ರಾಭಿಷೇಕ ಮತ್ತು ವೀರಶೈವ ವಿದ್ಯಾರ್ಥಿಗಳಿಗೆ ಉಚಿತ ವಸತಿ ನೀಡುವುದು ಮುಂತಾದ ಕಾರ್ಯಗಳನ್ನು ಮಾಡುವುದು ಎಂದು ನಮೂದಿಸಿದೆ.

**13**. ಶ್ರೀ ಮಠದಲ್ಲಿ ಪ್ರಭುಸ್ವಾಮಿಗಳು ಟ್ರಸ್ಟ ನ್ನು ಹುಟ್ಟುಹಾಕಿ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು ಎನ್ನುವ ಸಲಹೆಗೆ ಸಾಕ್ಷಿಯು 5 ಜನ ಟ್ರಸ್ಟಿಗಳು ಇದ್ದರು ಎಂದು ನುಡಿಯುತ್ತಾರೆ. ಶ್ರೀ ಪ್ರಭುಸ್ವಾಮಿಗಳು ಮಠಕ್ಕೆ ಸಂಬಂಧಿಸಿದಂತೆ ಟ್ರಸ್ಟ ಡೀಡ್ ಮಾಡಿದ್ದಾರೆ ಎನ್ನುವುದು ಸರಿ . ಇದು ಸಾರ್ವಜನಿಕ ಮಠ ಅಲ್ಲ ಎನ್ನುವುದು ಸರಿಯಲ್ಲ.

**14**. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 3 ರಲ್ಲಿ ಹೇಳಿರುವ ಟ್ರಸ್ಟಿಗಳು ನಿಪಿ.1 ಟ್ರಸ್ಟ ಡೀಡ್ ಆದ ನಂತರ ಆಯ್ಕೆಯಾದ ಮೊದಲ ಟ್ರಸ್ಟಿಗಳು ಎನ್ನುವುದು ಸರಿ . ಸದರಿ ಟ್ರಸ್ಟಿಗಳು ಈಗ ಜೀವಂತ ಇಲ್ಲ. ಶ್ರೀ ಪ್ರಭುಸ್ವಾಮಿ ಗಳು ಮತ್ತು ಶ್ರೀ ಗುರುಸಿದ್ಧ ಸ್ವಾಮಿಗಳು ಯಾವಾಗ ಮರಣ ಹೊಂದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರು ಮರಣ ಹೊಂದಿ ಸುಮಾರು 40 ವರ್ಷಗಳು ಆಗಿರಬಹುದು . ಅದೇ ರೀತಿ ನನ್ನ ಮುಖ್ಯವಿಚಾಣೆಯಲ್ಲಿ ಹೇಳಿದ ಟ್ರಸ್ಟಿಗಳು ಯಾವಾಗ ಮರಣ ಹೊಂದಿದ್ದಾರೆ ಎಂದು ನೆನಪಿಲ್ಲ.

**15.** 5 ಜನ ಟ್ರಸ್ಟಿಗಳು ಮರಣ ಹೊಂದಿದ ನಂತರ ಹೊಸ ಟ್ರಸ್ಟಿಗಳನ್ನು ಆಯ್ಕೆ ಮಾಡಿಲ್ಲ. ಯಾವ ಕಾರಣಕ್ಕಾಗಿ ಹೊಸ ಟ್ರಸ್ಟಿಗಳನ್ನು ನೇಮಕ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಟ್ರಸ್ಟ ಡೀಡ್ ನಲ್ಲಿ ಮಠದ ಸ್ವಾಮಿಗಳು ಸಮಾಜದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಠವನ್ನು ನಡೆಸಿಕೊಂಡ ಹೋಗಬೇಕು ಎಂದು ಹೇಳಲಾಗಿದೆ.

**16.** ಸಾಮಾನ್ಯವಾಗಿ ಸ್ವಾಮಿಗಳು ಜೀವಂತ ಇದ್ದ ಸಮಯದಲ್ಲಿ ಮತ್ತು ಅವರು ಮರಣ ಹೊಂದಿದ ಸಮಯದಲ್ಲಿ ಕಲ್ಮಠದ ಮರಿಸ್ವಾಮಿಗಳನ್ನು ಗುರುತಿಸಿರುತ್ತಾರೆ. ಮಠದ

ಪೀಠಾಧಿಕಾರಿಯೇ ಟ್ರಸ್ಟ ಡೀಡ್ ನಲ್ಲಿ ಹೇಳಿದ ಎಲ್ಲಾ ವಿಷಯಗಳನ್ನು ನೋಡಿಕೊಳ್ಳುತ್ತಿದ್ದರು. 1952 ರಿಂದ 2008 ನೇ ಇಸವಿಗಿಂತ ಮೊದಲು ಕಲ್ಮಠದ ಸ್ವಾಮಿಗಳು ಪೀಠಾಧಿಕಾರಿಯಾಗಿ ಮಠವನ್ನು ನಡೆಸಿಕೊಂಡು ಹೋಗುತ್ತಿದ್ದರು ಮತ್ತು ವೈದಿಕ ಪಾಠಶಾಲೆಯನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ವೈದಿಕ ಪಾಠಶಾಲೆ ಇಲ್ಲ. ನಿಪಿ.1 ಟ್ರಸ್ಟ ಡೀಡ್ ನಲ್ಲಿ " ನನ್ನ ಕರಕಮಲ ಸಂಜಾತರಾದ ಲೇಟು ಗುರುಸಿದ್ದ ಮರಿದೇವರು ಸರ್ವೆ ನಂಃ920, 921, 922 ರು ಎ ಷಡ್ಯೂಲ್ ಬಚ್ಚಯ್ಯನ ಜಾತಿ ಮಠದಲ್ಲಿ ಶ್ರೀ ಗುರುಸಿದ್ದಮರದೇವರ ಸಂಗತ್ರಿಯ ಪಾಠಾಶಾಲಾವನ್ನು ನೇಮಿಸಿಯಿರುವರು ಸದ್ರಿ ಪಾಠಾಶಾಲ ಬಂದಾಗಿ ನಡೆದರೆ ಸರಿ ಇಲ್ಲವಾದರೆ ಟ್ರಸ್ಟಿಗಳು ಸ್ವಾಧೀನಕ್ಕೆ ತೆಗೆದುಕೊಂಡು ಪಾಠಾಶಾಲಾ ನಡೆಸಿಕೊಂಡು ಹೋಗತಕ್ಕದ್ದು ಸದರಿ ಪಾಠ ಶಾಲಾದಲ್ಲಿ ಸಂಸ್ಕೃತ ವೈದೀಕ ಜ್ಯೋತಿಷ್ಯ ಪಾಠಗಳು ನಡೆಸಿಕೊಂಡು ಹೋಗಬೇಕು " ಎಂದು ನಮೂದು ಇದೆ ಎನ್ನುವುದು ಸರಿ .

**17.** ಸದರಿ ಮಠದಲ್ಲಿ ಸಂಸ್ಕೃತ , ವೈದಿಕ, ಜ್ಯೋತಿಷ್ಯ ಪಾಠಗಳು ಎಂದೂ ಸಹ ನಡೆದಿಲ್ಲ. ಪ್ರಸ್ತುತ ವೀರಶೈವ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಇಲ್ಲ. 2008 ಕ್ಕೆ ಮೊದಲೇ ಊಟ ಮತ್ತು ವಸತಿಯ ವ್ಯವಸ್ಥೆ ಸ್ಥಗಿತಗೊಂಡಿತ್ತು. ಸರ್ವೆ ನಂಃ920, 921 , 922 ರಲ್ಲಿ ಈಗಲೂ ಸಹ ಬಡ ವಿದ್ಯಾರ್ಥಿಗಳಿಗೆ ವಸತಿ ನಿಲಯ ಇದೆ ಎನ್ನುವುದು ಸರಿಯಲ್ಲ.

**18.** ನಿಪಿ.1 ರ ಖಂಡಿಕೆ 1 ರಲ್ಲಿ ಎ ಶೆಡ್ಯೂಲ್ ಆಸ್ತಿ ಪೈಕಿ ಸರ್ವೆ ನಂಃ920, 921 ಮತುತ 922 ಬಚ್ಚಯ್ಯನ ಜಾತಿ ವಾದ ಶಾಲಾಸ್ಥಳದಲ್ಲಿ 1 ನೇಯದ ನನ್ನ ಆತ್ಮ ಸಂತೋಷದಿಂದ

2 ನೆಯ ಕಲ್ಲುಮಠದ ಗುರುಸಿದ್ದ ಸ್ವಾಮಿಗಳಾದ ನನ್ನ ಅನುಮತಿಯಿಂದ 1 ನೇಯಾದ ಅಂತ್ಯಕಾಲದ ಕ್ರಿಯಾಸಮಾಧಿಯ ಮಂಟಪ ಕಟ್ಟಿಸಲು ಪ್ರಾರಂಭಿಸಿದ್ದು ಇದರ ಸ್ವತ್ತು 3 ಅಂಕಣ ಪ್ರಕಾರ 3 ರೂಮುಗಳು ಕಟ್ಟಿಸಲು ಪ್ರಾರಂಬಿಸಿದ್ದು ಅವುಗಳ ವಿಸ್ತೀರ್ಣವನ್ನು ನಮೂದಿಸಿದ್ದು ಜೀವಂತ ಇರುವವರೆಗೆ ಮುಗಿದರೆ ಸರಿ ಇಲ್ಲದಿದ್ದರೆ ಎ ಶೆಡ್ಯೂಲ್ ಆಸ್ತಿಯಿಂದ ಬಂದ ವರಮಾನದಿಂದ ಸದರಿ ಕಟ್ಟಡವನ್ನು ಕಟ್ಟಿ ಮುಗಿಸತಕ್ಕದ್ದು ಎಂದು ಅಲ್ಲದ ಸದರಿ ಸಮಾಧಿ ಮಂಟಪ ಕಟ್ಟಡಕ್ಕೆ ಕೈಲಾಸ ಮಂಟಪ ಎಂದು ಹೆಸರು ಇಟ್ಟಿದ್ದು ಪ್ರಭು ಸ್ವಾಮಿಗಳು ಚೀಫ್ ಮೆಂಬರ್ ಆಗಿರುವುದಾಗಿ ನಮೂದು ಇದೆ ಎನ್ನುವುದು ಸರಿ . ಸಾಕ್ಷಿಯು ಸ್ವತಃ ನುಡಿಯುತ್ತಾರೆ ಸದರಿ ಜಾಗವು ಕಲ್ಮಠಕ್ಕೆ ಸೇರಿದ ಆಸ್ತಿ ಅಲ್ಲ. ಅದು ಸಮಾಜಕ್ಕೆ ಸೇರಿದ ಆಸ್ತಿಯಲ್ಲಿ ಇದೆ. ಅಂದರೆ ಸಂತೆ ಮಾರ್ಕೆಟ್ ನಲ್ಲಿ ಇದೆ. ಕೈಲಾಸ ಮಂಟಪದಲ್ಲಿ ಸಮಾಧಿ ಇದ್ದು, ಮಠದಲ್ಲಿ ಇದೆ ಎನ್ನುವುದು ಸರಿಯಲ್ಲ. ಸಮಾಧಿಯ ಮೇಲೆ ಲಿಂಗಮೂರ್ತಿಯನ್ನು ಸ್ಥಾಪಿಸಲಾಗಿದೆ. ಲಿಂಗಮೂರ್ತಿಗೆ ದಿನಾಲು ಪೂಜೆಯನ್ನು ನೈವೇದ್ಯವನ್ನು ಕಲ್ಮಠದಿಂದ ಮಾಡುತ್ತಾರೆ. ಪೂಜಾ ಕಾರ್ಯಗಳನ್ನು ನಿರ್ವಹಿಸಲು ಕಲ್ಮಠದ ಪೀಠಾಧಿಕಾರಿಯು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿರುತ್ತಾರೆ. ಕಲ್ಮಠದ ಪೀಠಾಧಿಕಾರಿಯು ಪೂಜೆ ಮಾಡುವ ವ್ಯಕ್ತಿಗೆ ಗೌರವಧನವನ್ನು ನೀಡುತ್ತಿದ್ದರು ಎನ್ನುವುದು ಸರಿ .

**19**. 2008 ರಲ್ಲಿ ನಾನು ಮಹಾಜನ ಸಭೆಯ ಮೂಲಕ ಗೌರವಾಧ್ಯಕ್ಷನಾದ ನಂತರ ಲಿಂಗ ಮೂರ್ತಿಗೆ ಪೂಜೆ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಿದ್ದೆನು. ಅವರಿಗೆ ನಾನು

ಗೌರವಧನ ನೀಡುತ್ತಿದ್ದೆನು. ಗೌರವಧನ ನೀಡುತ್ತಿದ್ದ ಬಗ್ಗೆ ಲೆಕ್ಕ ಪುಸ್ತಕ ಇಟ್ಟಿದ್ದೇನೆ. ಸದರಿ ಲೆಕ್ಕ ಪುಸ್ತಕಗಳು ನನ್ನ ಸ್ವಾಧೀನದಲ್ಲಿ ಇದೆ. ಆ ದಾಖಲೆಗಳನ್ನು ಈ ಪ್ರಕರದಲ್ಲಿ ಹಾಜರುಪಡಿಸಿದ್ದೇನೆ.

**20**. ಸಮಾಧಿ ಇರುವ ಜಾಗವು ಸಮಾಜದ ಜಾಗ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಕಂಪ್ಲಿ ಗ್ರಾಮದಲ್ಲಿ ಕಂಪ್ಲಿ ಕಲ್ಲುಮಠಕ್ಕೆ ಸೇರಿದ ಆಸ್ತಿಗಳು ಇವೆ. ಆ ಬಗ್ಗೆ ದಾಖಲೆ ನೀಡಿದ್ದೇನೆ. ಶ್ರೀ ಕ್ಷೇತ್ರ ಕಲ್ಲು ಮಠಕ್ಕೆ ಸೇರಿದ ಶಾಖಾ ಮಠಗಳು ಎಲ್ಲೆಲ್ಲಿ ಇವೆ ಎನ್ನುವ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ. ಶ್ರೀ ಕ್ಷೇತ್ರ ಕಲ್ಲುಮಠಕ್ಕೆ ಸೇರಿದ ಜಮೀನುಗಳು ಎರಡು ಕೆರೆ ಗ್ರಾಮದಲ್ಲಿಯು ಇದೆ. ಅದರ ವಿಸ್ತೀರ್ಣ 44 ಎಕರೆ ಇರಬಹುದು. ಎರಡುಕೆರೆ ಗ್ರಾಮದಲ್ಲಿ 47.75 ಸೆಂಟ್ಸ್ ಜಮೀನು ಇದೆ ಎಂದರೆ ಸರಿ . ದಂಡಿನ ಹೀರಾಳು ಗ್ರಾಮದಲ್ಲಿ ಶ್ರೀ ಕ್ಷೇತ್ರ ಕಲ್ಲು ಮಠಕ್ಕೆ ಸೇರಿದ ಆಸ್ತಿಗಳು ಇವೆ. ಅಲ್ಲಿ ಸುಮಾರು 9 ಎಕರೆ ಜಮೀನು ಇರಬಹುದು. ಅದೇ ರೀತಿ ದರ್ಗಾ ಹೊನ್ನೂರು ಕನೆಕಲ್ ಮಂಡಲನಲ್ಲಿ ಸುಮಾರು 8-9 ಎಕರೆ ಜಮೀನು ಇರಬಹುದು. ಗಾದಿಗನೂರು ಗ್ರಾಮ, ಹೊಸಪೇಟೆಯ ಶ್ರೀ ಕ್ಷೇತ್ರ ಕಲ್ಲು ಮಠದ ಹೆಸರಿನಲ್ಲಿ ಮುಕ್ಕಾಲು ಎಕರೆ ಜಮೀನು ಇರಬಹುದು. ಇಬ್ರಾಹಿಂ ಪುರ ಗ್ರಾಮ , ಸಿರುಗುಪ್ಪ ತಾಲೂಕಿನಲ್ಲಿ ಶ್ರೀ ಕ್ಷೇತ್ರ ಕಲ್ಲು ಮಠಕ್ಕೆ ಸಂಬಂಧಿಸಿದ ಜಮೀನು ಇದೆ ಎನ್ನುವುದು ನನಗೆ ನೆನಪಿಲ್ಲ.

**21.** ದಾವಾ ಶೆಡ್ಯೂಲ್ ನಲ್ಲಿ ನಮೂದಿಸಿದ ಕ್ರಮಸಂಖ್ಯೆ 1 ರಿಂದ 14 ಆಸ್ತಿಗಳು ಕಂಪ್ಲಿ ಗ್ರಾಮದಲ್ಲಿ ಇರುತ್ತವೆ. ದರ್ಗಾ ಹೊನ್ನೂರು , ಗಾದಿಗನೂರು , ಇಬ್ರಾಹಿಂ ಪುರ , ಎರಡುಕೆರೆಯಲ್ಲಿ ಇರುವ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿಲ್ಲ. ಏಕೆಂದರೆ ಆ ಜಮೀನುಗಳಿಂದ ಯಾವುದೇ

ಆದಾಯ ಇಲ್ಲ. ಶ್ರೀ ಕ್ಷೇತ್ರ ಕಲ್ಲು ಮಠದ ಪೀಠಾಧಿಕಾರಿಯು ಮುಖ್ಯಸ್ಥರು ಆಗಿದ್ದು ಅವರೆ ಆಸ್ತಿಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಫೀಠಾಧಿಕಾರಿಯು ಮುಖ್ಯಸ್ಥನಾಗಿದ್ದು ಆಸ್ತಿಯ ಉಸ್ತುವಾರಿಯನ್ನು ನೋಡಿಕೊಳ್ಳಲು ಸಮಿತಿಯನ್ನು ರಚನೆ ಮಾಡುತ್ತಾರೆ. 1952 ರಿಂದ 2008 ರ ವರೆಗೆ ಸಮಿತಿ ರಚನೆಯಾಗಿದ್ದ ಬಗ್ಗೆ ಮತ್ತು ಸಮಿತಿ ಸದಸ್ಯರುಗಳ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆಗಳು ಇಲ್ಲ. ಜಮೀನಿನಿಂದ ಬಂದ ಆದಾಯದ ಬಗ್ಗೆ ಲೆಕ್ಕ ಪತ್ರ ಇಟ್ಟಿರುತ್ತೇನೆ. ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಜಮೀನಿನಿಂದ ಬಂದ ಆದಾಯದ ಬಗ್ಗೆ ಆಡಿಟ್ ಆಗಿರುತ್ತದೆ. ಆಡಿಟ್ ವರದಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ.

**22.** ಮಠದ ಆಸ್ತಿಯಿಂದ ಬಂದ ಆದಾಯದಿಂದ ಸಮಾಜದ ಚಟುವಟಿಕೆಗಳು , ಆಧ್ಯಾತ್ಮಿಕ ಚಿಂತನೆ , ಧಾರ್ಮಿಕ ಕಾರ್ಯಗಳು ಮುಂತಾದವುಗಳನ್ನು ಮಾಡಲಾಗುತ್ತದೆ. ಈ ರೀತಿಯ ಕಾರ್ಯಗಳನ್ನು ಮಾಡುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಟ್ರಸ್ಟ ಡೀಡ್ ನಲ್ಲಿ ಸಂಸ್ಕೃತ , ವೈದಿಕ , ಜ್ಯೋತಿಷ್ಯ ಪಾಠಾಶಾಲೆಯನ್ನು ಮಾತ್ರ ನಡೆಸಬೇಕು ಎಂದು ಹೇಳಿದೆ ಎನ್ನುವುದು ಸರಿ . ಸದರಿ ಪಾಠ ಶಾಲೆಗಳು ಕಲ್ಲುಮಠದ ವ್ಯಾಪ್ತಿಯಲ್ಲಿ ಇಲ್ಲ. ಮೊದಲಿಗೆ ಪ್ರಾರಂಭವಾದ ಸಂಸ್ಥೆ ಶ್ರೀ ಗುರುಸಿದ್ದ ಸ್ವಾಮಿ ಶಿಕ್ಷಣ ಸಂಸ್ಥೆ. ಅದು ಯಾವಾಗ ಪ್ರಾರಂಭ ಆಗಿದೆ ಎಂದು ನನಗೆ ನೆನಪಿಲ್ಲ. ಸದರಿ ಸಂಸ್ಥೆಯಲ್ಲಿ 1 ನೇ ತರಗತಿಯಿಂದ 5 ನೇ ತರಗತಿ ವರೆಗೆ

ವಿದ್ಯಾಭ್ಯಾಸ ನೀಡಲಾಗುತ್ತಿತ್ತು. ಶ್ರೀ ಪ್ರಭುಸ್ವಾಮಿಗಳ ಪ್ರೌಢ ಶಾಲೆಯು 1989 ರಲ್ಲಿ ಮೊದಲಿಗೆ ಪ್ರಾರಂಭ ಆಯಿತು ಎನ್ನುವುದು ನೆನಪಿಲ್ಲ. ಸದರಿ ಸಂಸ್ಥೆಯಲ್ಲಿ 8 ನೇ ತರಗತಿಯಿಂದ 10 ನೇ ತರಗತಿಯ ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಶ್ರೀ ಪ್ರಭುಸ್ವಾಮಿಗಳ ಪ್ರೌಢ ಶಾಲೆಯು ಗ್ರಾಂಟ್ ಇನ್ ಏಡ್ 2011 ರಲ್ಲಿ ಆಗಿದೆ ಎಂದು ಕೇಳಲಾಗಿ ಸಾಕ್ಷಿಯು ನಮ್ಮ ಅವಧಿಯಲ್ಲಿ ಆಗಿದೆ ಎಂದು ನುಡಿಯುತ್ತಾರೆ. ಶ್ರೀ ಗುರುಸಿದ್ಧ ಸ್ವಾಮಿಗಳ ವಿದ್ಯಾಸಂಸ್ಥೆ ಅಡಿಯಲ್ಲಿ ಐಟಿಐ ಕಾಲೇಜು ಬರುತ್ತದೆ. ಐಟಿಐ ಕಾಲೇಜು ಯಾವಾಗ ಪ್ರಾರಂಭ ಆಯಿತು ಎಂದು ನೆನಪಿಲ್ಲ. ಐಟಿಐ ಕಾಲೇಜಿನಲ್ಲಿ 2 ಶಾಖೆಗಳು ಇವೆ. ಅವುಗಳು ಮೆಕ್ಯಾನಿಕಲ್ , ಎಲೆಕ್ಟ್ರಿಕಲ್ ವಿಭಾಗ ಇರುತ್ತವೆ. ಐಟಿಐಕಾಲೇಜಿನಲ್ಲಿ ಫಿಟ್ಟರ್ , ವೆಲ್ಡರ್ ಮತ್ತು ಎಲೆಕ್ಟಿಕಲ್ ವಿಭಾಗ ಇದೆ ಎನ್ನುವುದು ಸರಿ . ಸಾಕ್ಷಿಯು ಸ್ವತಃ ನುಡಿಯುತ್ತಾರೆ ಫಿಟ್ಟರ್ ಮತ್ತು ವೆಲ್ಡರ್ ಒಂದೇ ವಿಭಾಗದಲ್ಲಿ ಬರುತ್ತದೆ. ಸದರಿ ಕಾಲೇಜಿಗೆ ಸರ್ಕಾರ ಅನುದಾನ ನೀಡಿದೆ.

**23.** ಐಟಿಐ ಕಾಲೇಜು ಪ್ರಾರಂಭ ಆದ ನಂತರ ಪ್ರಾಥಮಿಕ ಶಾಲೆ 2013 ರಲ್ಲಿ ಪ್ರಾರಂಭ ಆಗಿರುತ್ತದೆ. ನಾನು ಹೇಳಿದ ಶಾಲಾ ಕಾಲೇಜುಗಳು ಶ್ರೀ ಕಲ್ಲುಮಠದ ವ್ಯಾಪ್ತಿಗೆ ಬರುತ್ತವೆ. ದಾವೆಯಲ್ಲಿ ಹೇಳಿದ ಶಾಲಾ ಕಾಲೇಜುಗಳು ನಿಪಿ.1 ಟ್ರಸ್ಟ ಡೀಡ್ ವ್ಯಾಪ್ತಿಯಲ್ಲಿ ಬರುವುದಿಲ್ಲ. ಶಾಲಾಕಾಲೇಜಿನ ಕಟ್ಟಡಗಳನ್ನು ಸಮಿತಿಯವರು ಕಟ್ಟಿದ್ದಾರೆ. ಸಮಿತಿಯಲ್ಲಿ ಕಾರ್ಯಕಾರಿ ಸದಸ್ಯರು , ಪದಾಧಿಕಾರಿಗಳು , ಕಾರ್ಯದರ್ಶಿ , ಖಜಾಂಚಿ, ಅಧ್ಯಕ್ಷರು ಇರುತ್ತಾರೆ. ಸಮಿತಿಯನ್ನು ಮಹಾಜನ ಸಭೆ ಆಯ್ಕೆ ಮಾಡುತ್ತದೆ. ಮಹಾಜನ ಸಭೆ ಕರೆಯಲು ನಿಪಿ.1 ಟ್ರಸ್ಟ

ಡೀಡ್ ನಲ್ಲಿ ಅವಕಾಶ ನೀಡಿದೆ . ನಿಪಿ.1 ಟ್ರಸ್ಟ ಡೀಡ್ ನಲ್ಲಿ ಮಹಾಜನ ಸಭೆ ಸಮಿತಿಯನ್ನು ಆಯ್ಕೆ ಮಾಡುವ ಬಗ್ಗೆ ಉಲ್ಲೇಖ ಇಲ್ಲ ಎನ್ನುವುದು ಸರಿಯಲ್ಲ.

**(ಮುಂದುವರೆದ ಪಾಟಿ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಗಿದೆ. )**

ಕಲ್ಮಠ = ಕಲ್ಲುಮಠ

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**